**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಸಾಗರ.**

**ಸಿ.ಸಿ.ನಂಃ 1081/2025**

ಫಿರ್ಯಾದಿ: ಮೊಹಮ್ಮದ್ ರಫೀಕ್ ಎಂ.

ವಿರುದ್ಧ

ಆರೋಪಿ: ಫಾರೂಕ್ ತಂದೆಃ ದಿಃ ಇಸ್ಮಾಯಿಲ್

ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಾಗರ, ಆದ ನಾನು

ಫಾರೂಕ್ ತಂದೆಃ ದಿಃ ಇಸ್ಮಾಯಿಲ್
ವಯಸ್ಸು ಸುಮಾರು 54 ವರ್ಷ,
ವಾಸಃ ಹಿಲ್ಸೈಡ್ ಬಿಲ್ಡಿಂಡ್ ಹತ್ತಿರ, 7 ನೇ ಬ್ಲಾಕ್,
ಕೃಷ್ಣಪುರ, ಸೂರತ್‌ಕಲ್, ಮಂಗಳೂರು,
ದಕ್ಷಿಣ ಕನ್ನಡ ಜಿಲ್ಲೆ.

**ನಿಮ್ಮ ಮೇಲೆ ಕೆಳಕಂಡಂತೆ ಆಪಾದನೆ ಮಾಡುವುದೇನೆಂದರೆ**

ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ನಿಮ್ಮ ಆರ್ಥಿಕ ಅಡಚಣೆ ಮತ್ತು ವ್ಯವಹಾರ ಅಡಚಣೆ ನಿವಾರಿಸಿಕೊಳ್ಳುವ ಸಲುವಾಗಿ ರೂ. 2,00,000/- ಗಳನ್ನು ದಿನಾಂಕ 05-01-2025 ರಂದು ಫಿರ್ಯಾದಿಯಿಂದ ಸಾಲವನ್ನು 3 ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಪಡೆದು, ಸದರಿ ಸಾಲವನ್ನು ಮರುಪಾವತಿಸದೇ ಇದ್ದು, ಪಿರ್ಯಾದುದಾರರು ಸಾಲದ ಹಣವನ್ನು ಮರುಪಾವತಿಸಲು ಕೋರಿಕೊಂಡಿದ್ದು, ನೀವು ದಿನಾಂಕಃ 06-05-2025 ರಂದು ನಿಮ್ಮ ಖಾತೆ ಹೊಂದಿರುವ ಸೌತ್ ಇಂಡಿಯಾ ಬ್ಯಾಂಕ್, ಮಂಗಳೂರು ಶಾಖೆಯ ನಿಮ್ಮ ಖಾತೆಗೆ ಸೇರಿದ ಚೆಕ್ ಸಂಖ್ಯೆ 201931 ನ್ನು ರೂ. ರೂ.2,00,000/- ಗಳಿಗೆ ಪಿರ್ಯಾದಿ ಪರವಾಗಿ ನೀಡಿರುತ್ತೀರಿ ಮತ್ತು ಫಿರ್ಯಾದುದಾರರು ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಾಗರ ಶಾಖೆಗೆ ನಗದೀಕರಿಸಲು

ಹಾಜರುಪಡಿಸಿದಾಗ, ದಿನಾಂಕ 07–05–2025 ರಂದು ನೀವು ನೀಡಿದ ಚೆಕ್ " **ಸಾಕಷ್ಟು ಹಣವಿಲ್ಲ** (**Funds insufficient**) " ಎಂಬ ಷರಾದೊಂದಿಗೆ ಅಮಾನ್ಯಗೊಂಡಿರುತ್ತದೆ. ನಂತರ ಫಿರ್ಯಾದಿದಾರರು, ದಿನಾಂಕ 13–05–2025 ರಂದು ನೋಟಿಸ್ಸನ್ನು ನ್ಯಾಯಾವಾದಿಗಳ ಮೂಲಕ ಕಳುಹಿಸಿದ್ದು, ಸದರಿ ನೋಟಿಸ್ಸು ದಿನಾಂಕ 16–05–2025 ರಂದು ನಿಮಗೆ ಖುದ್ದು ಜಾರಿಯಾಗಿದ್ದರೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ನೀವು ಫಿರ್ಯಾದಿ ಮೋಸ ಮತ್ತು ನಷ್ಟ ಮಾಡುವ ಉದ್ದೇಶದಿಂದ ಚೆಕ್ಕನ್ನು ಕೊಟ್ಟು, ಲಿಖಿತ ಪತ್ರಗಳ ವರ್ಗಾವಣೆ ಅಧಿನಿಯಮ ಕಲಂ. 138 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಆಪಾದನೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ದಿನಾಂಕ

(ಮಾದೇಶ ಎಂ.ವಿ.,)
ಪ್ರಧಾನ ಸಿವಿಲ್ ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.